## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 618 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 09.03.2026 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ರೈತರು ಬೆಳೆಯುವ ಅಕ್ಕಿಯು ಸ್ಥಳೀಯ ಬೇಡಿಕೆಯ ಕೊರತೆಯಿಂದಾಗಿ ಬೇರೆ ರಾಜ್ಯಗಳಿಗೆ ಸರಬರಾಜು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುವುದಿಲ್ಲ. |
| ಆ | ರಾಜ್ಯ ಸರ್ಕಾರವು ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಪಡಿತರದಾರರಿಗೆ ಉಚಿತವಾಗಿ ವಿತರಿಸುವ ಅಕ್ಕಿಯನ್ನು ಸ್ಥಳೀಯ ರೈಸ್‌ಮಿಲ್ ಗಳಿಂದ ನೇರವಾಗಿ ಖರೀದಿಸುವ ಬಗ್ಗೆ ಸರ್ಕಾರದ ನಿಲುವೇನು; | ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ-2013 (NFSA) ಅಡಿ ರಾಜ್ಯಕ್ಕೆ ಪ್ರತಿ ಮಾಹೆ ಕೇಂದ್ರ ಸರ್ಕಾರದಿಂದ 2,17,403 ಮೆ.ಟನ್. ಆಹಾರಧಾನ್ಯ ಉಚಿತವಾಗಿ ಬಿಡುಗಡೆಯಾಗುತ್ತಿದ್ದು, ಸದರಿ ಪ್ರಮಾಣವನ್ನು ಕೇಂದ್ರ ಎನ್.ಎಫ್.ಎಸ್.ಎ ಫಲಾನುಭವಿಗಳಿಗೆ ಉಚಿತವಾಗಿ ವಿತರಿಸಲಾಗುತ್ತಿದೆ. ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಸಂಗ್ರಹಿಸುವ ಭತ್ತ ಪರಿವರ್ತಿತ ಅಕ್ಕಿ, ರಾಗಿ ಮತ್ತು ಬಿಳಿಜೋಳವನ್ನೂ ಸಹ ಎನ್.ಎಫ್‌ಎಸ್.ಎ ಹಂಚಿಕೆ ಭಾಗವಾಗಿ ವಿತರಿಸಲಾಗುತ್ತಿದೆ.<br>ಪ್ರತಿ ಮಾಹೆ ರಾಜ್ಯ ಎನ್.ಎಫ್.ಎಸ್.ಎ ಫಲಾನುಭವಿಗಳಿಗೆ ಅಗತ್ಯವಿರುವ ಅಂದಾಜು ಆಹಾರಧಾನ್ಯ ಪ್ರಮಾಣ 20,000 ಮೆ.ಟನ್ ಆಗಿದ್ದು, ಅಗತ್ಯ ಅಕ್ಕಿ ಪ್ರಮಾಣವನ್ನು ಹಾಗೂ ಅನ್ನಭಾಗ್ಯ ಯೋಜನೆಯಡಿ ಪ್ರಸ್ತುತ ಪ್ರತಿ ಮಾಹೆ ರಾಜ್ಯದ ಅರ್ಹ ಫಲಾನುಭವಿಗಳಿಗೆ ಹೆಚ್ಚುವರಿ 5 ಕೆ.ಜಿ ಅಕ್ಕಿ ಹಂಚಿಕೆ ಮಾಡಲಾಗುತ್ತಿದ್ದು, ಪ್ರತಿ ಮಾಹೆ ಅಂದಾಜು 2.10 ಲಕ್ಷ ಮೆ.ಟನ್ ಅಕ್ಕಿ ಅಗತ್ಯವಿದ್ದು, ಸದರಿ ಪ್ರಮಾಣವನ್ನು OMSS(D) ಯೋಜನೆಯಡಿ ಭಾರತ ಆಹಾರ ನಿಗಮದಿಂದ (FCI) ನಿಂದ ಖರೀದಿಸಲಾಗುತ್ತಿದೆ. |

| | | |
|---|---|---|
| ಇ | ರೈತರು ಬೆಳೆದ ಭತ್ತವನ್ನು ನೇರವಾಗಿ ಸ್ಥಳೀಯ ರೈಸ್‌ಮಿಲ್‌ಗಳಿಂದ ಖರೀದಿಸಿದಲ್ಲಿ ರಾಜ್ಯದ ರೈತರಿಗೆ ಆರ್ಥಿಕ ಲಾಭವಾಗುವ ಕುರಿತು ಸರ್ಕಾರ ಚಿಂತಿಸಿದೆಯೇ; ಚಿಂತಿಸಿದ್ದಲ್ಲಿ, ಈ ಬಗ್ಗೆ ಸರ್ಕಾರದ ಅನುಸರಣಾ ಕ್ರಮಗಳೇನು? | ಪ್ರಸ್ತುತ ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ಕನಿಷ್ಟ ಬೆಂಬಲ ಯೋಜನೆಯಡಿ ರೈತರಿಂದ ನೇರವಾಗಿ ಭತ್ತ ಖರೀದಿ ಮಾಡಲಾಗುತ್ತಿದೆ.<br>2025-26 ನೇ ಸಾಲಿನ ಮುಂಗಾರು ಋತುವಿನಲ್ಲಿ ಕೇಂದ್ರ ಸರ್ಕಾರದ ಅನುಮೋದನೆಯನ್ವಯ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 5000 ಮೆಟ್ರಿಕ್ ಟನ್ ಭತ್ತವನ್ನು ಖರೀದಿಸಲು ಆದೇಶಿಸಲಾಗಿದ್ದು, ಅದರನ್ವಯ ಪ್ರಸ್ತುತ ಖರೀದಿ ಪ್ರಕ್ರಿಯೆ ಜಾರಿಯಲ್ಲಿದ್ದು, ದಿನಾಂಕ 20-02-2026 ರವರೆಗೆ 1421 ರಾಜ್ಯದ ರೈತರಿಂದ 10.99 ಕೋಟಿ ಮೌಲ್ಯದ 4658.750 ಮೆಟ್ರಿಕ್ ಟನ್ ಭತ್ತವನ್ನು ಖರೀದಿಸಲಾಗಿದೆ. |

ಇ-ಆನಾಸ 30 ಆರ್‌ಪಿಆರ್ 2026

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ
ಇಲಾಖಾ ಸಚಿವರು